**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 21.04.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಸಿ ಯು ವಕೀಲರಿಂದ :**

ಪ್ರತಿವಾದಿ 1, 3, 5, 6 ಇವರ ಪರವಾಗಿ ಸಾಕ್ಷಿ ನುಡಿಯುತ್ತಿರುವೆನು. ಈ ದಾವೆಯಲ್ಲಿ ಲಿಖಿತ ಪತ್ರ ಸಲ್ಲಿಸಲು ವಕೀಲರಿಗೆ ನಾವೇ ಮಾಹಿತಿ ನೀಡಿರುವೆವು. ನಾವೆಲ್ಲರೂ ಕೂಡಿ ಈ ಲಿಖಿತ ಪತ್ರವನ್ನು ಸಲ್ಲಿಸಿರುವೆವು. ವಾದಿಯರು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ ಕೋರಿ ದಾಖಲು ಮಾಡಿರುವರು. ನನ್ನ ತಂದೆಯ ಹೆಸರು ಸಿದ್ದಪ್ಪ ತಂದೆ ಬಸಪ್ಪ ಕಲ್ಯಾಣಿ ಎಂದರೆ ಸರಿ. ದಿಃ 27.11.2020 ರಂದು ಮೃತ ಪಟ್ಟಿರುವರು ಎಂದರೆ ಸರಿ. ಸಿದ್ದಪ್ಪನ ಮೊದಲ ಹೆಂಡತಿ ಮೃತ ಪಾರ್ವತಿ ನನ್ನ ಜನಕ ತಾಯಿಯಾಗಿರುವಳು ಎಂದರೆ ಸರಿ. ನನ್ನ ತಾಯಿ ಸಿದ್ದಪ್ಪನ ಮೊದಲನೇಯ ಹೆಂಡತಿ ಎಂದರೆ ಸರಿ. ಇವರಿಗೆ ನಾನು, ಪ್ರತಿವಾದಿ 1, 3 ರಿಂದ 6 ಜನ ಮಕ್ಕಳು ಎಂದರೆ ಸರಿ. ಪ್ರತಿವಾದಿ 9 ನನ್ನ ಮಗನಾಗಿರುವನು ಎಂದರೆ ಸರಿ. ನನ್ನ ತಾಯಿ ಪಾರ್ವತಿ ಮೃತ ಪಟ್ಟ ನಂತರ ನನ್ನ ತಂದೆ ಭಾಗೀರತಿ ಎಂಬುವವರ ಜೊತೆ 2 ನೆ ವಿವಾಹ ಮಾಡಿಕೊಂಡಿರುವರು ಎಂದರೆ ಸರಿ. ಇವರ ವೈವಾಹಿಕ ಜೀವನದಿಂದ ಪ್ರತಿವಾದಿ 7 ಮತ್ತು 8 ರವರ ಜನನ ಆಗಿರುವುದು ಎಂದರೆ ಸರಿ. ಭಾಗೀರತಿ ಮೃತ ಪಟ್ಟ ನಂತರ ನನ್ನ ತಂದೆ ವಾದಿ 3 ರವರು 3 ನೇ ವಿವಾಹ ಆಗಿರುವರು ಎಂದರೆ ಸರಿಯಲ್ಲ. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು 2 ರವರು ಜನ್ಮ ತಾಳಿರುವರು ಎಂದರೆ ಸರಿಯಲ್ಲ. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕಾಮಕಟ್ಟಿ ಗ್ರಾಮ, ಯಾದವಾಡ ಗ್ರಾಮದಲ್ಲಿ ನಮ್ಮ ಮನೆತನಕ್ಕೆ ಸಂಬಂಧಪಟ್ಟಂತೆ ಜಮೀನು, ಖುಲ್ಲಾ ಜಾಗ ಮತ್ತು ಅಂಗಡಿಗಳು ಇರುವವು ಎಂದರೆ ಸರಿ. ವಾದ ಪತ್ರದಲ್ಲಿ

ತೋರಿಸಿರುವ ಕೆಲವೊಂದು ಆಸ್ತಿಗಳು ತಪ್ಪಾಗಿ ನಮೂದು ಮಾಡಿರುವೆವು. ಕಾಮನಕಟ್ಟಿ ಗ್ರಾಮದಲ್ಲಿ ಸರ್ವೇ ನಂಬರ್ 51/1 ವಿಸ್ತೀರ್ಣ 2 ಎಕರೆ , 51/2 ವಿಸ್ತೀರ್ಣ 2 ಎಕರೆ 9 ಗುಂಟೆ , 51/3 ವಿಸ್ತೀರ್ಣ 3 ಎಕರೆ 30 ಗುಂಟೆ ಜಮೀನು ಇರುವುದು. ಈ ದಾವಾ ಆಸ್ತಿಗಳಲ್ಲಿ ಯಾವ ಸರ್ವೇ ನಂಬರ್ ಜಮೀನು ನಮ್ಮ ಕುಟುಂಬ ಆಸ್ತಿ ಆಗಿಲ್ಲ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಮುಧೋಳ ಪಟ್ಟಣದಲ್ಲಿ ಇರುವ ಸಿಟಿಎಸ್ ನಂಬರ್ ಆಸ್ತಿ ಮತ್ತು ಯಾದವಾಡ್ ದಲ್ಲಿರುವ ಆಸ್ತಿಗಳು ನಮ್ಮ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

3. ಸರ್ವೇ ನಂಬರ್ 51/1, 51/2, 51/3, 51/1+2, 366/2 ಈ ಜಮೀನುಗಳು ನನ್ನ ಹೆಸರಿನಲ್ಲಿ ಇರುವವು ಎಂದರೆ ಸಾಕ್ಷಿ ನುಡಿಯುದೇನೆಂದರೆ ಸರ್ವೇ ನಂಬರ್ 51/1+2 ಈ ಜಮೀನು ಮತ್ತು ಸರ್ವೇ ನಂಬರ್ 51/1, 51/2 ಈ ಎರಡು ಜಮೀನುಗಳು ಒಂದೇ ಜಮೀನು ಆಗಿರುವವು. ಈ ಜಮೀನುಗಳು ನನ್ನ ಹೆಸರಿನಲ್ಲಿ ಇರುವವು. ಸರ್ವೇ ನಂಬರ್ 51/3 ನನ್ನ ಮಗನ ಹೆಸರಿನಲ್ಲಿ ಇರುವುದು ಎಂದರೆ ಸರಿ. ಈ ಜಮೀನುಗಳಿಗೆ ಕಂದಾಯ ಅಧಿಕಾರಗಳು ಹಕ್ಕು ಬದಲಾವಣೆ ಆದೇಶ ಸಂಖ್ಯೆ ಹೆಚ್ 156 ಮತ್ತು ಹೆಚ್ 86, ಟಿ 115 ರ ಪ್ರಕಾರ ಆದೇಶ ಮಾಡಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ಉತ್ತರಿಸಿರುವರು.

4. ದಾವಾ ಆಸ್ತಿ ಕ್ರಮ ಸಂಖ್ಯೆ 6 ರಿಂದ 8 ರ ಆಸ್ತಿಗಳು ಪ್ರತಿವಾದಿ 10 ರ ಹೆಸರಿನಲ್ಲಿ ದಾಖಲೆ ಇರುವವು ಎಂದರೆ ಸರಿ. ಪ್ರತಿವಾದಿ 10 ರ ಹೆಸರು ಎಂ ಆರ್ ನಂ. ಟಿ 115 ರ ಪ್ರಕಾರ ಹಕ್ಕು ಬದಲಾವಣೆಯಾಗಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಉತ್ತರಿಸಿರುವರು. ಈ ಹಕ್ಕು ಬದಲಾವಣೆಗೆ ವಾದಿಯರು ಪಕ್ಷಗಾರರು ಆಗದೇ ಇರುವುದರಿಂದ ಅವರಿಗೆ ಅದು ಬಂದನಕಾರಿ ಆಗಿಲ್ಲ ಎಂದರೆ ಸಾಕ್ಷಿ ಈ ಹಕ್ಕು ಬದಲಾವಣೆ ಆದ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುವರು. ದಾವಾ ಆಸ್ತಿ ಕ್ರಮ ಸಂಖ್ಯೆ 9 ಮತ್ತು 10 ರ ಆಸ್ತಿಗಳು ಪ್ರತಿವಾದಿ 4 ರವರ ಹೆಸರಿನಲ್ಲಿ ದಾಖಲು ಇರುವುದು ಎಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ11 ಪ್ರತಿವಾದಿ 6 ರವರ ಹೆಸರಿನಲ್ಲಿ ದಾಖಲು ಇರುವುದು ಎಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ 12 ಪ್ರತಿವಾದಿ 10 ರವರ ಹೆಸರಿನಲ್ಲಿ ದಾಖಲು ಇರುವುದು ಎಂದರೆ ಸರಿ. ಈ ಹಕ್ಕು ಬದಲಾವಣೆಯು ವಾದಿಯ ಗಮನಕ್ಕೆ ತರದೆ ನಾನು ಮತ್ತು ಉಳಿದ ಪ್ರತಿವಾದಿಯರು

ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಜಂಟಿ ಕುಟುಂಬದ ಬಂದ ಆದಾಯ ಖರೀದಿ ಮಾಡಿರುವೆವು ಎಂದರೆ ಸರಿಯಲ್ಲ. 1984 ರಲ್ಲಿ ಕುಟುಂಬದ ಆಸ್ತಿಗಳಲ್ಲಿ ಪಾಲು ವಾಟ್ನಿ ಮಾಡಿದ್ದೇವೆ ಎಂದು ಸಾಕ್ಷಿ ಉತ್ತರಿಸಿರುವರು. ಈ 1984 ರಲ್ಲಿ ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ, ಆದರೆ ಯಾವ ದಾಖಲೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. 1984 ರಲ್ಲಿ ನಮ್ಮ ತಂದೆ ಜೀವಿತಾವಧಿಯಲ್ಲಿ ನಮಗೆ ವಾಟ್ನಿ ಮಾಡಿಕೊಟ್ಟಿರುವರು. ಈ ವಾಟ್ನಿಗೆ ನನ್ನ ತಂದೆ, ಪ್ರತಿವಾದಿ 1, ನಾನು, ಪ್ರತಿವಾದಿ 3, ಪ್ರತಿವಾದಿ 4, ಪ್ರತಿವಾದಿ 6, ಪ್ರತಿವಾದಿ 7 ರವರ ಮಧ್ಯೆ ಪಾಲು ವಾಟ್ನಿ ಮಾಡಿಕೊಟ್ಟಿರುವರು. ಈ ಪಾಲು ವಾಟ್ನಿಯನ್ನು ಲಿಖಿತ ರೂಪದಲ್ಲಿ ನನ್ನ ತಂದೆ ಬರೆದುಕೊಟ್ಟಿರುವರು. ಈ ವಾಟ್ನಿ ಪತ್ರ ಉಪನೊಂದಣಿ ಕಚೇರಿಯಲ್ಲಿ ನೊಂದ ಮಾಡಿರುವುದಿಲ್ಲ, ಇದರ ಆಧಾರದ ಮೇರೆಗೆ ಕಂದಾಯ ಅಧಿಕಾರಿಗಳಿಗೆ ವರದಿ ನೀಡದ್ದು ಆ ಪ್ರಕಾರ ಅವರು ಹೆಸರು ದಾಖಲೆ ಮಾಡಿರುವರು. 1984 ರಲ್ಲಿ ನನ್ನ ತಾಯಿ ಪಾರ್ವತಿ ಹಾಗೂ ಪ್ರತಿವಾದಿ 7 ಮತ್ತು 8 ರವರ ತಾಯಿ ಭಾಗೀರತಿ ಇಬ್ಬರು ಸಹ ಮೃತ ಪಟ್ಟಿದ್ದರು. ಆ ವಾಟ್ನಿ ಪತ್ರದಲಿಲ ವಾದಿಯರ ಹೆಸರು ಕಾಣಿಸಿಲ್ಲ ಏಕೆಂದರೆ ಅವರು ನಮಗೆ ಗೊತ್ತಿರದೇ ಇರುವುದರಿಂದ.

5. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ವಾದಿ 3 ರವರ ಜೊತೆ ವಿವಾಹ 3 ನೇ ವಿವಾಹ ಮಾಡಿಕೊಂಡ ಸಂಗತಿ ಮತ್ತ ಇವರ ವೈವಾಹಿಕ ಜೀವನದಿಂದ ವಾದಿ 1 ವತ್ತು 2 ರವರ ಜನ್ನ ತಾಳಿದ ಬಗ್ಗೆ ನಮಗೆ ಮೊದಲಿನಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಈ 3 ನೇ ವಿವಾಹ ಮಾಡಿಕೊಂಡಿದುದ ಆಗ ವಾದಿ 1 ಮತ್ತು 2 ರವರು ಜನ್ಮ ತಾಳಿದ್ದರೂ ಸಹ 1984 ರ ವಾಟ್ನಿ ಪತ್ರಕ್ಕೆ ವಾದಿ 1 ರಿಂದ 3 ರವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಈ ಸಂಗತಿ ತಮಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರು ಈ ವಾಟ್ನಿ ಮಾಡಿಕೊಳ್ಳುವ ಪೂರ್ವದಲಿಲ ಮತ್ತು ನಂತರ ಸಾಕಷ್ಟು ಬಾರಿ ಮುಧೋಳ ಗ್ರಾಮದಲ್ಲಿ ಮತ್ತು ಯಾದವಾಡ್ ಗ್ರಾಮದಲ್ಲಿ ಪಾಲು ವಾಟ್ನಿ ಮಾಡಿಕೊಡುವಂತೆ ಹಿರಿಯರನ್ನು ಸೇರಿಸಿ ಕೇಳಿದ್ದರು ಎಂದರೆ ಸರಿಯಲ್ಲ. ಅವರು ಪಾಲು ವಾಟ್ನಿ ನೀಡುವಂತೆ ಕೇಳಿದರೂ ಸಹಿತ 2021 ರವರೆಗೂ ಒಂದಿಲ್ಲ ಒಂದು ಕಾರಣ ಹೇಳುತ್ತಾ ಪಾಲು ನೀಡುವುದನ್ನು ಮುಂದೂಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಜೀವಿತದ ಕೊನೆಯ ಅಬಧಿಯವಗಿರೆಹೂ

ವಾದಿಯರಿಗೆ ಕುಟುಬಂದ ಆಸ್ತಿಯಲ್ಲಿ ಪಾಲು ನೀಡುವುದಾಗಿ ಎಂದು ಹೇಳುತ್ತಾ ಬಂದು ಅವರು ಪಾಲು ನೀಡದೆ ಮೃತ ಪಟ್ಟಿರುವರು, ಈ ಸಂಗತಿ ನಾನಗೆ  ಮಾಹಿತಿ ಇಲ್ಲ. ನಾನು ಹಾಜರು ಪಡಿಸಿರುವ ವಾಟ್ನಿ ಪತ್ರದ ಬಗ್ಗೆ ನನಗೆ ಮಾಹಿತಿ ಇರುವುದು. ವಾಟ್ನಿ ಪತ್ರದ ಪ್ರಕಾರ 4 ಸರ್ವೇ ನಂಬರ್  ಜಮೀನುಗಳು ಇರುವವು ಎಂದರೆ ಸರಿ.  ಈ 4 ಜಮೀನುಗಳ ವಾಟ್ನಿ ಮಾಡುವ ಸಮಯದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ.

6. ಸರ್ವೇ ನಂಬರ್  4 ಮತ್ತು ಸರ್ವೇ ನಂಬರ್  366 ಈ ಜಮೀನುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿರುವವು. ಸರ್ವೇ ನಂಬರ್  368/2, 39/1 ಈ ಆಸ್ತಿಗಳು ಪೂರ್ವಜರ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ಮೂಲತಃ ಕೃಷಿ ಮತ್ತು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ತನ್ನ ಹೆಸರಿನಲ್ಲಿ  ಖರೀದಿ ಮಾಡಿರುವ ಆಸ್ತಿಗಳು ಪೂರ್ವಜರಿಂದ ಬಂದ ಆದಾಯದಿಂದ ಖರೀದಿ ಮಾಡಿರುವರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.  ಯಾದವಾಡ್ ಗ್ರಾಮದ ಖುಲ್ಲಾ ಜಾಗ ಮತ್ತು ಮನೆಯ ಅಂಗಡಿ ಆಸ್ತಿಗಳು ವಾಟ್ನಿ ಪತ್ರದಲ್ಲಿ ಇರುವವು. ಈ ಆಸ್ತಿಗಳ ನಂಬರ್ ಗಳು ನನಗೆ ಹೇಳಲು ಬರುವುದಿಲ್ಲ.  ವಾಟ್ನಿ ಪತ್ರದಲ್ಲಿ ಮನೆ ಮತ್ತು ಖುಲ್ಲಾ ಜಾಗದ ಆಸ್ತಿಯ ನಂಬರ್ ಕಾಣಿಸಿಲ್ಲ ಎಂದರೆ ಸರಿ. ಈ ವಾಟ್ನಿ ಮಾಡುವ ಸಮಯದಲ್ಲಿ ಯಾದವಾಡ್ ಗ್ರಾಮದ ಆಸ್ತಿಗಳೆಲ್ಲವೂ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಈ ಯಾದವಾಡ್ ಗ್ರಾಮದ ಆಸ್ತಿಗಳು ಪೂರ್ವಜರಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ.  ಕೆಲವೊಂದು ನನ್ನ ತಂದೆಯ ಖರೀದಿ ಮಾಡಿರುವರು. ಯಾವ ಆಸ್ತಿಗಳು ಪೂರ್ವಜರಿಂದ ಬಂದ ಆಸ್ತಿಗಳು ಮತ್ತು ಯಾವ ಆಸ್ತಿಗಳು ನನ್ನ ತಂದೆ ಖರೀದಿ ಮಾಡಿರುವ ಆಸ್ತಿಗಳು ಎಂದು ನನಗೆ ಹೇಳಲು ಬರುವುದಿಲ್ಲ. 1984 ರಲ್ಲಿ ನಮ್ಮ ಮನೆತನದಲ್ಲಿ  ಆಗಿರುವ ವ್ಯವಹಾರಗಳ ಬಗ್ಗೆ ನನಗೆ ಅಷ್ಟೊಂದು ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

7. ಪ್ರತಿವಾದಿ  7 ರವರಿಗೆ 1984 ರಲ್ಲಿ ಎಷ್ಟು ವಯಸ್ಸು ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ  7 ತನ್ನ 40 ನೇವಯಸ್ಸಿನಲ್ಲಿ ಮೃತ ಪಟ್ಟಿರುವನು. ಈ ವಾಟ್ನಿ ಪತ್ರದಲ್ಲಿ ಪ್ರತಿವಾದಿ  7 ಅಲ್ಪವಾಯಿ ಆಗಿದ್ದು ಆತನ ಪಾಲನ ಸಂರಕ್ಷಣೆದಾರರು ಅಂತ ಅದರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.  1984 ರಲ್ಲಿ ನನ್ನ ಮತ್ತು ನನ್ನ ತಂದೆ ,

ಪ್ರತಿವಾದಿ 1, 3 ರಿಂದ 7 ರವರ ಮಧ್ಯೆ ಪಾಲು ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ಈ ವಾಟ್ನಿ ಪತ್ರಕ್ಕೆ ವಾದಿಯರು ಪಕ್ಷಗಾರರು ಆಗದೇ ಇರುವುದರಿಂದ ಈ ವಾಟ್ನಿ ಪತ್ರವು ವಾದಿಯರಿಗೆ ಯಾವುದೇ ರೀತಿಯ ಸಂಬಂಧ ಇರುವುಲ್ಲ ಎಂದರೆ ಸರಿಯಲ್ಲ. ವಾಟ್ನಿ ಪತ್ರವು ಯಾದವಾಡ್ ಗ್ರಾಮದಲ್ಲಿ ಬರೆದಿರುವರು. ಬಾಂಡ್ ರೈಟರ್ ದೇಸಾಯಿ ಎಂಬುವವರು ಬರೆದುಕೊಟ್ಟಿವರು. ಅವರು ಈಗ ಮೃತ ಪಟ್ಟಿರುವರು. ವಾಟ್ನಿ ಪತ್ರದ ಮೇಲೆ ಸಾಕ್ಷಿದಾರರು ಅಂತ ಸಹಿ ಮಾಡಿರುವ ಸಾಕ್ಷಿದಾರರು ಈಗ ಮೃತ ಪಟ್ಟಿರುವರು. 1984 ರಲ್ಲಿ ವಾಟ್ನಿ ಪತ್ರ ಆಗಿದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ